ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯಲ್ಲಿರುವ ನೌಕರುಗಳ (ಅಧಿಕಾರಿಗಳು ಮತ್ತು ಅಧಿಕಾರೇತರುಗಳು) ಸಂಖ್ಯೆ ಎಷ್ಟು (ವಿವರ ನೀಡುವುದು)?*

*ಆ) ಖಾಲಿ ಇರುವ ಜಾಗಕ್ಕೆ ಯಾವಾಗ ನೇಮಕ ಮಾಡಲಾಗುವುದು?*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

| | | |
|---|---|---|
| ಅ) | ಅಧಿಕಾರಿಗಳು | 71 |
| | ನೌಕರರು | 307 |
| | **ಒಟ್ಟು** | **378** |

ಆ) ಖಾಲಿ ಇರುವ ಪದೋನ್ನತಿ ಹುದ್ದೆಗಳನ್ನು ಪದೋನ್ನತಿಯಿಂದ ಹಾಗೂ ನೇರ ನೇಮಕಾತಿ ಬಗ್ಗೆ ಆಯ್ಕೆ ಪ್ರಾಧಿಕಾರದವರಿಗೆ ಪಟ್ಟಿ ಕಳುಹಿಸಿದ್ದು ಅವರಿಂದ ಆಯ್ಕೆ ಪಟ್ಟಿ ಬಂದನಂತರ ಭರ್ತಿ ಮಾಡಲಾಗುವುದು.

## ಸಹಕಾರ ಸಂಘಗಳ ಕಾಯಿದೆ ತಿದ್ದುಪಡಿ ಕುರಿತು

3026 - ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಸಹಕಾರ ಸಂಘಗಳ ಕಾಯ್ದೆ ತಿದ್ದುಪಡಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೆ?*

*ಆ) ಇದ್ದಲ್ಲಿ ಯಾವಾಗ ಕಾಯಿದೆಗೆ ತಿದ್ದುಪಡಿ ಮಾಡಲಾಗುವುದು?*

*ಇ) ಇಲ್ಲದಿದ್ದಲ್ಲಿ ಕಾರಣಗಳೇನು?*

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಇದೆ.

ಆ) ತಿದ್ದುಪಡಿ ವಿಧೇಯಕವನ್ನು ವಿಧಾನ ಸಭೆಯಲ್ಲಿ ದಿನಾಂಕ:25.8.97ರಂದು ಮಂಡಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

## ಪುತ್ತೂರು ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣ ನಿರ್ಮಾಣ

3028 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಪುತ್ತೂರು ಕೃಷಿ ಉತ್ಪನ್ನ ಮಾರುಕಟ್ಟೆ ನಿರ್ಮಾಣಕ್ಕಾಗಿ ಈ ತನಕ ಮಾಡಿದ ಖರ್ಚು ಎಷ್ಟು*

*ಸಂಪರ್ಕ ವ್ಯವಸ್ಥೆಗೆ ಮಾಡಿದ ಖರ್ಚು ಎಷ್ಟು? ಯಾವ ವರ್ಷ ಈ ಕಾಮಗಾರಿಗಳನ್ನು ಪ್ರಾರಂಭಿಸಲಾಯಿತು?*

*ಆ) ಈ ಮಾರುಕಟ್ಟೆಗೆ ವ್ಯಾಪಾರವನ್ನು ಯಾವಾಗ ಸ್ಥಳಾಂತರಿಸಲಾಗುವುದು? ಈ ತನಕ ಸ್ಥಳಾಂತರಿಸಲಾದುದಕ್ಕೆ ಕಾರಣಗಳೇನು?*

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಪುತ್ತೂರು ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣ ನಿರ್ಮಾಣಕ್ಕೆ ಸಂಬಂಧಿಸಿದಂತೆ ಈವರೆಗೆ ಒಟ್ಟು ರೂ.175.75 ಲಕ್ಷವನ್ನು ಖರ್ಚು ಮಾಡಲಾಗಿರುತ್ತದೆ. 1978ನೇ ವರ್ಷದಲ್ಲಿ ಪುತ್ತೂರು ಮಾರುಕಟ್ಟೆ ಪ್ರಾಂಗಣದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾರಂಭಿಸಲಾಯಿತು, ಸದರಿ ಸಮಿತಿಗೆ ಸಂಬಂಧಿಸಿದಂತೆ ಪುತ್ತೂರು ವಿಧಾನ ಸಭಾ ಮತಕ್ಷೇತ್ರದ ಗ್ರಾಮೀಣ ಸಂಪರ್ಕ ರಸ್ತೆಗಳಿಗೆ 1995-96ನೇ ಸಾಲಿನಲ್ಲಿ ರೂ.15.00 ಲಕ್ಷಗಳು ಖರ್ಚಾಗಿರುತ್ತದೆ. 1995-96ನೇ ಸಾಲಿನ ಗ್ರಾಮೀಣ ಸಂಪರ್ಕ ರಸ್ತೆಯನ್ನು 1996-97ರಲ್ಲಿ ಪ್ರಾರಂಭಿಸಲಾಯಿತು.

ಆ) ಪುತ್ತೂರು ಅಡಿಕೆ ವರ್ತಕರ ಸಂಘ ಮತ್ತು ಇತರರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ವ್ಯಾಪಾರ ಸ್ಥಳಾಂತರದ ಬಗ್ಗೆ ರಿಟ್ ಅರ್ಜಿ ಸಂಖ್ಯೆ 711:97 ದಾಖಲಿಸಿದ್ದು, ದಿನಾಂಕ 23.7.1997 ರಂದು ರಾಜ್ಯ ಉಚ್ಚ ನ್ಯಾಯಾಲಯವು, ಮೈಸೂರು ವಿಭಾಗದ ಜಂಟಿ ನಿರ್ದೇಶಕರಿಗೆ, ಪುತ್ತೂರು ಸಮಿತಿಯ ಪ್ರಾಂಗಣಕ್ಕೆ ಒದಗಿಸಿರುವ ಸೌಲಭ್ಯಗಳನ್ನು ಪರಿಶೀಲಿಸಲು ದಿನಾಂಕ 23.7.97 ರಿಂದ 3 ವಾರದೊಳಗೆ ಭೇಟಿ ನೀಡಲು ನಿರ್ದೇಶನ ನೀಡಿದ್ದು ಅದರಂತೆ ಸದರಿ ಅಧಿಕಾರಿಗಳು ಅಡಿಕೆ ವರ್ತಕರ ಸಂಘದ ಸದಸ್ಯರ ಸಭೆಯನ್ನು ದಿನಾಂಕ 18.8.97ರಂದು ಕರೆದು, ಸೆಪ್ಟೆಂಬರ್ 1997 ತಿಂಗಳೂಳಗೆ ಪ್ರಾಂಗಣಕ್ಕೆ ವ್ಯಾಪಾರ ಸ್ಥಳಾಂತರಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.

## ಪುತ್ತೂರು ತಾಲ್ಲೂಕಿನಲ್ಲಿ ಆರಾಧನಾ ಯೋಜನೆಯಲ್ಲಿ ಹಣ ಬಿಡುಗಡೆ

3029 - ಶ್ರೀ ಡಿ. ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಪುತ್ತೂರು ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಆರಾಧನಾ ಯೋಜನೆಯಲ್ಲಿ ಎಷ್ಟು ಹಣ ಹಂಚಲಾಗಿದೆ?*

*ಆ) ಎಷ್ಟು ಅರ್ಜಿದಾರರ ಅರ್ಜಿಗಳು ಬಾಕಿ ಇದೆ ಇದಕ್ಕೆ ಬೇಕಾದ ಮೊತ್ತ ಎಷ್ಟು?*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ರೂ. 3,83,328-00

ಆ) 14 ಅರ್ಜಿಗಳು ಬಾಕಿ ಇದೆ ಇದಕ್ಕೆ ಬೇಕಾಗುವ ಮೊತ್ತ ರೂ. 5,60,000-00